# ಕರ್ನಾಟಕ ವಿಧಾನ ಪರಿಷತ್

| | | |
|---|---|---|
| 1 | ಮಾನ್ಯ ಸದಸ್ಯರ ಹೆಸರು | ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್)<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) |
| 2 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 960 |
| 3 | ಉತ್ತರಿಸಬೇಕಾದ ದಿನಾಂಕ | 19-12-2018 |
| 4. | ಉತ್ತರಿಸಬೇಕಾದವರು | ಮಾನ್ಯ ಕಾರ್ಮಿಕ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಮೈಸೂರು ನಗರದ 100 ಹಾಸಿಗೆಗಳ ಇ.ಎಸ್.ಐ. ಆಸ್ಪತ್ರೆಯ ವ್ಯಾಪ್ತಿಗೆ ಯಾವ ಯಾವ ಜಿಲ್ಲೆಗಳು ಹಾಗೂ ಎಷ್ಟು ಜನ ಕಾರ್ಮಿಕರು ಬರುತ್ತಾರೆ; | ಕಾರ್ಮಿಕರ ರಾಜ್ಯ ವಿಮಾ ಆಸ್ಪತ್ರೆ, ಮೈಸೂರಿನ ವ್ಯಾಪ್ತಿಗೆ 05 ಜಿಲ್ಲೆಗಳು ಒಳಪಟ್ಟಿರುತ್ತವೆ. ವಿವರ ಕೆಳಕಂಡಂತಿದೆ.<br>1 ಮೈಸೂರು<br>2 ಚಾಮರಾಜನಗರ<br>3 ಮಂಡ್ಯ<br>4 ಕೊಡಗು<br>5. ಹಾಸನ<br>ಈ ವಲಯದಲ್ಲಿ ಒಟ್ಟು 2,25,960 ಮಂದಿ ಕಾರ್ಮಿಕರು ವಿಮಾ ಯೋಜನೆಯ ವ್ಯಾಪ್ತಿಗೆ ಒಳಪಟ್ಟಿರುತ್ತಾರೆ. |
| ಆ | ಈ ಆಸ್ಪತ್ರೆಗೆ ಮಂಜೂರಾಗಿರುವ ವೈದ್ಯಕೀಯ, ಅರೆ ವೈದ್ಯಕೀಯ, ವೈದ್ಯಕೀಯೇತರ ಸಿಬ್ಬಂದಿಗಳ ಸಂಖ್ಯೆ ಎಷ್ಟು; ಹಾಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿ ಎಷ್ಟು; | ಈ ಆಸ್ಪತ್ರೆಗೆ ಮಂಜೂರಾದ ಹುದ್ದೆಗಳ ವಿವರ ಕೆಳಕಂಡಂತಿದೆ (see table below)<br>ಒಬ್ಬರು ದಂತ ಚಿಕಿತ್ಸಕರು ಹಾಗೂ ಇಬ್ಬರು ಗುತ್ತಿಗೆ ಆಧಾರಿತ ವಿಮಾ ವೈದ್ಯಾಧಿಕಾರಿಗಳು ಹಾಗೂ 36 ವೈದ್ಯಕೀಯೇತರ ಸಿಬ್ಬಂದಿಗಳು ಬಾಹ್ಯ ಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿದ್ದಾರೆ. |

| ಕ್ರ. ಸಂ. | ವೃಂದ | ಹುದ್ದೆಗಳ ವಿವರ | | |
|---|---|---|---|---|
| | | ಮಂಜೂರಾತಿ | ಭರ್ತಿ | ಖಾಲಿ |
| 1 | ವೈದ್ಯಕೀಯ | 41 | 26 | 15 |
| 2 | ಅರೆ ವೈದ್ಯಕೀಯ | 67 | 45 | 22 |
| 3 | ವೈದ್ಯಕೀಯೇತರ | 96 | 16 | 80 |
| 4 | ಒಟ್ಟು | 204 | 87 | 117 |

| | | |
|---|---|---|
| ಇ | ಖಾಲಿ ಇರುವ ಸಿಬ್ಬಂದಿ ವರ್ಗದವರನ್ನು ಭರ್ತಿ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದೇ; | ಈ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳ ಪೈಕಿ, 159 ವಿಮಾ ವೈದ್ಯಾಧಿಕಾರಿಗಳು, 60, ಪ್ರಥಮ ದರ್ಜೆ ಸಹಾಯಕರು. 75 ದ್ವಿತೀಯ ದರ್ಜೆ ಸಹಾಯಕರು 100 ಶುಶ್ರೂಷಕ ಹಾಗೂ 73 ಫಾರ್ಮಸಿಸ್ಟ್ ಹುದ್ದೆಗಳನ್ನು ಕರ್ನಾಟಕ ಲೋಕಸೇವಾ ಆಯೋಗದ ಮುಖಾಂತರ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗಿದೆ.<br><br>ಇಲಾಖೆಯಲ್ಲಿ ಸಿಬ್ಬಂದಿಗಳ ಕೊರತೆ ನಿವಾರಿಸಲು, ಒಟ್ಟಾರೆ 78 ವೈದ್ಯಾಧಿಕಾರಿಗಳು ಗುತ್ತಿಗೆ ಆಧಾರದ ಮೇಲೆ ಹಾಗೂ 35 ಶುಶ್ರೂಷಕರು, 26 ಫಾರ್ಮಾಸಿಸ್ಟ್, 10 ತಾಂತ್ರಿಕ ಮತ್ತು ಅರೆ ತಾಂತ್ರಿಕ, 14 ವಾಹನ ಚಾಲಕರು, 247 ಗ್ರೂಪ್ ಡಿ ನೌಕರರನ್ನು ಬಾಹ್ಯ ಗುತ್ತಿಗೆ ಮೇರೆಗೆ ನೇಮಕಾತಿ ಮಾಡಿಕೊಳ್ಳಲಾಗಿದೆ. |
| ಈ | ಈ ಆಸ್ಪತ್ರೆಯಲ್ಲಿ ಯಂತ್ರೋಪಕರಣಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಈ ಬಗ್ಗೆ ಕೈಗೊಂಡಿರುವ ಕ್ರಮಗಳೇನು? | ಹೌದು. ಕಾರ್ಮಿಕರ ರಾಜ್ಯ ವಿಮಾ ಆಸ್ಪತ್ರೆ, ಮೈಸೂರಿಗೆ ರೂ. 12.59 ಕೋಟಿ ಮೌಲ್ಯದ ಉಪಕರಣಗಳನ್ನು ಸರಬರಾಜು ಮಾಡಲು ಕಾರ್ಮಿಕರ ರಾಜ್ಯ ವಿಮಾ ನಿಗಮದ ಸಹಮತ ಕೋರಿ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ. |

ಕಾಇ 262 ಎಲ್‌ಎಸ್‌ಐ 2018

(ವೆಂಕಟರಮಣಪ್ಪ)
ಕಾರ್ಮಿಕ ಸಚಿವರು